ಕಾಮಗಾರಿಗಳು ಪೂರ್ಣಗೊಂಡಿರುತ್ತವೆ ಹಾಗೂ 1 ವಿತರಣಾ ಕಾಲುವೆಯ (ವಿತರಣಾ ಕಾಲುವೆ ಸಂಖ್ಯೆ:21) ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

2. ಬಲದಂಡೆ ಕಾಲುವೆ: ಈ ಕಾಲುವೆ ಅಡಿಯಲ್ಲಿ 37 ವಿತರಣಾ ಕಾಲುವೆಗಳು ಬರುತ್ತಿದ್ದು, ಅದರಲ್ಲಿ 34 ವಿತರಣಾ ಕಾಲುವೆಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಉಳಿದ 3 ವಿತರಣಾ ಕಾಲುವೆಗಳ (ವಿತರಣಾ ಕಾಲುವೆಗಳ ಸಂಖ್ಯೆ:17, 35 ಮತ್ತು 37) ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಯೋಜನೆಯಡಿಯಲ್ಲಿ 4 ವಿತರಣಾ ಕಾಲುವೆಗಳ ಕಾಮಗಾರಿಗಳು ಮಾತ್ರ ಬಾಕಿ ಇರುತ್ತವೆ.

ಇ) 2010–11ನೇ ಸಾಲಿಗೆ ರೂ.229.77ಲಕ್ಷ ಅನುದಾನ ನಿಗದಿ ಪಡಿಸಲಾಗಿದೆ. ಮೇ 2010ರ ಅಂತ್ಯಕ್ಕೆ 15.92 ಲಕ್ಷ ರೂ.ಗಳ ಅನುದಾನವು ಬಿಡುಗಡೆಯಾಗಿರುತ್ತದೆ. ಬಾಕಿ ಉಳಿದ ಅನುದಾನ ರೂ.213.85 ಲಕ್ಷಗಳಾಗಿರುತ್ತದೆ.

ಸರ್ಕಾರದ ಸವಲತ್ತುಗಳನ್ನು ಪಡೆಯಲು ನಿಗದಿಪಡಿಸಿರುವ ಆದಾಯ ಮಿತಿ

17(19) ಮಾನ್ಯ ಖಾದರ್ ಯು ಟಿ:(ಮಂಗಳೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಸವಲತ್ತುಗಳನ್ನು ಪಡೆಯಲು ರಾಜ್ಯ ಸರ್ಕಾರವು ನಿಗದಿಪಡಿಸಿರುವ ಆದಾಯ ಮಿತಿ ಎಷ್ಟು.

ಆ) ಆದಾಯ ಮಿತಿಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ.

ಇ) ಪ್ರಸಕ್ತ ಆದಾಯ ಮಿತಿಯಿಂದ ಅರ್ಹ ಬಡ ಫಲಾನುಭವಿಗಳು ಸರ್ಕಾರಿ ಸವಲತ್ತುಗಳನ್ನು ಪಡೆಯಲು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜೆ. ಕರುಣಾಕರರೆಡ್ಡಿ(ಕಂದಾಯ ಸಚಿವರು):

ಅ) ಸರ್ಕಾರದ ವಿವಿಧ ಪ್ರಮುಖ ಯೋಜನೆಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವಿಧವಾ ವೇತನ, ಅಂಗವಿಕಲ ವೇತನ, ಭಾಗ್ಯಲಕ್ಷ್ಮಿ ಯೋಜನೆ ಇತರೇ ಯೋಜನೆಗಳಡಿ ಸವಲತ್ತು ಪಡೆಯುವ ಫಲಾನುಭವಿಗಳು ಭಿನ್ನವಾಗಿರುವುದರಿಂದ ಬಡತನ ರೇಖೆಯನ್ನು ಗುರುತಿಸಲು ವಿವಿಧ ಮಾನದಂಡವನ್ನು ನಿಗದಿಪಡಿಸಲಾಗಿದೆ.

ಕ್ರ.ಸಂ.	ಯೋಜನೆ	ನಿಗದಿಪಡಿಸಿರುವ ಆದಾಯ ಮಿತಿ	ನಿಗದಿಪಡಿಸಿರುವ ವರ್ಷ
1	ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ	ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಾಲಯವು, ಬಡತನ ರೇಖೆಗಿಂತ ಕೆಳಗಿರುವವರನ್ನು ಗುರುತಿಸಲು ಕುಟುಂಬದ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳ ಬಗ್ಗೆ 13 ಅಂಶಗಳನ್ನು ನಿಗದಿಪಡಿಸಿದೆ. ಪ್ರತಿಯೊಂದು ಅಂಶಕ್ಕೆ 0–4 ಅಂಕಗಳನ್ನು ನಿಗದಿಪಡಿಸಲಾಗಿದೆ. ಅದರಂತೆ 26 ಅಂಕಗಳು ಅಥವಾ ಅದಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ಕುಟುಂಬಗಳನ್ನು ಬಡತನ ರೇಖೆಗಿಂತ ಕೆಳಗಿದೆ ಎಂದು ಪರಿಗಣಿಸುವುದು.	2007
2	ಸಂಧ್ಯಾ ಸುರಕ್ಷಾ ಯೋಜನೆ	ರೂ. 20,000 ಕ್ಕಿಂತ ಹೆಚ್ಚಿಗೆ ಇರಕೂಡದು.	2007

3	ಅಂಗವಿಕಲ ವೇತನ	ಆದಾಯ ಮಿತಿ ರೂ.6000/–	1988
4	ವಿಧವಾ ವೇತನ	ಆದಾಯ ಮಿತಿ ರೂ.6000/–	1995
5	ಭಾಗ್ಯಲಕ್ಷ್ಮಿ:	ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಗುರುತಿಸಿ. ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬ	2006
6	ಶಾಲಾ ಫೀಸ್ ಮಾಫಿ:	ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳಿಗೆ ಹಾಗೂ ಎಸ್.ಸಿ/ಎಸ್.ಟಿ ಗಂಡು ಮಕ್ಕಳಿಗೆ (6 ರಿಂದ 10ನೇ ತರಗತಿ) ಸರ್ಕಾರೇತರ ಶುಲ್ಕ ಮರುಪಾವತಿ	2009
7	ಬಿಪಿಎಲ್ ಸೌಲಭ್ಯ ಪಡೆಯಲು:	ಗ್ರಾಮಾಂತರ ಪ್ರದೇಶಗಳಿಗೆ ರೂ.12,000/– ಹಾಗೂ ಪಟ್ಟಣ ಪ್ರದೇಶಗಳಿಗೆ ರೂ.17,000/–	2006

ಆ) ವಿವಿಧ ಯೋಜನೆಗಳಿಗೆ ಒಂದೇ ರೀತಿಯಾದ ಆದಾಯ ಮಿತಿಯನ್ನು ನಿಗದಿಪಡಿಸಲು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಹಾಗೂ ವಿಸ್ತೃತವಾದ ಅಧ್ಯಯನ ನಡೆಸಿ ತೀರ್ಮಾನಿಸಲಾಗುವುದು.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಪ್ರಸ್ತುತ ವಿವಿಧ ಯೋಜನೆಗಳ ಪ್ರಯೋಜನೆ ಪಡೆಯಲು ಇರುವ ಸೂಕ್ತವಾದ ಆದಾಯದ ಮಾನದಂಡವನ್ನು ನಿಗದಿಪಡಿಸಲು

ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಹಾಗೂ ವಿಷಯದ ಬಗ್ಗೆ ಸೂಕ್ತ ಅಧ್ಯಯನ ನಡೆಸಿ ತೀರ್ಮಾನಿಸಲಾಗುವುದು.

ಬಂಟ್ವಾಳ ತಾಲ್ಲೂಕಿನ (ಎಸ್.ಇ.ಝೆಡ್), ವಿಶೇಷ ಆರ್ಥಿಕ ವಲಯ

18(21) ಶ್ರೀ ಖಾದರ್ ಯು ಟಿ:(ಮಂಗಳೂರು) ಮಾನ್ಯ ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ವಿಶೇಷ ಆರ್ಥಿಕ ವಲಯ (ಎಸ್.ಇ.ಝೆಡ್) ದಲ್ಲಿ ಎಷ್ಟು ಕಂಪನಿಗಳಿಗೆ ಸ್ಥಳವನ್ನು ನೀಡಲಾಗಿದೆ. ಈ ಯೋಜನೆಯಲ್ಲಿ ಎಷ್ಟು ಕಂಪನಿಗಳು ಸ್ಥಳಾವಕಾಶವನ್ನು ಕೋರಿ ಅರ್ಜಿ ಸಲ್ಲಿಸಿವೆ.

ಆ) ಮಂಜೂರಾತಿ ಪಡೆದ ಕಂಪನಿಗಳೂ ಯಾವುವು, ಸದರಿ ಕಂಪನಿಗಳು ಯಾವ ಯಾವ ಉದ್ದೇಶಕ್ಕಾಗಿ ಅರ್ಜಿ ಸಲ್ಲಿಸಿದ್ದವು, ಕಂಪನಿವಾರು ಎಷ್ಟು ಉದ್ಯೋಗವನ್ನು ಕಲ್ಪಿಸಲಾಗಿದೆ.

ಇ) ಕಾರ್ಯಾರಂಭ ಮಾಡದೆ ಇರುವ ಕಂಪನಿಗಳು ಯಾವುವು, ಯಾವ ಕಾರಣಗಳಿಂದಾಗಿ ಕಾರ್ಯರಂಭ ಮಾಡಿರುವುದಿಲ್ಲ (ವಿವರ ನೀಡುವುದು).

ಶ್ರೀ ಮುರುಗೇಶ್ ಆರ್ ನಿರಾಣಿ(ಮಧ್ಯಮ ಕೈಗಾರಿಕಾ ಸಚಿವರು):

ಅ) ಬಂಟ್ವಾಳ ತಾಲ್ಲೂಕಿನಲ್ಲಿ 3 ವಿಶೇಷ ಆರ್ಥಿಕ ವಲಯಗಳು ಸ್ಥಾಪನೆಯಾಗುತ್ತವೆ. ಅವುಗಳ ವಿವರ ಕೆಳಕಂಡಂತಿರುತ್ತವೆ.

ಎಸ್ಇಝೆಡ್ ಹೆಸರು	ವಲಯ	ಭೂಮಿ ವಿವರ
ಬಿಎ ಟೆಕ್ ಪಾರ್ಕ್ ಪ್ರೈ. ಲಿ.	ಐಟಿ/ಐಟಿಇಎಸ್	ಸ್ವಂತ ಭೂಮಿ
ಇನ್ಫೋಸಿಸ್ಸ್ ಟೆಕ್ನಾಲಜಿಸ್ ಲಿ.	ಐಟಿ/ಐಟಿಇಎಸ್	ಕೆಐಎಡಿಬಿ ಹಂಚಿಕೆ
ಕೆಐಎಡಿಬಿ	ಐಟಿ/ಐಟಿಎಎಸ್	ಕೆಐಎಡಿಬಿ ಭೂಮಿ

ಇನ್ಫೋಸಿಸ್ಸ್ ಟೆಕ್ನಾಲಜಿಸ್ ಲಿ.ನ ಎಸ್ಇಝೆಡ್ ನಲ್ಲಿ ತನ್ನದೆ ಆದ ಒಂದು ಘಟಕವನ್ನು ಸ್ಥಾಪನೆ ಮಾಡಿರುತ್ತದೆ. ಕೆಐಎಡಿಬಿ ಎಸ್ಇಝೆಡ್‌ನಲ್ಲಿ 10 ಘಟಕಗಳಿಗೆ ಜಮೀನನ್ನು ಹಂಚಿಕೆ ಮಾಡಲಾಗಿದೆ.